RegdNo B G155 Sri (138) 2 27—7—1965

ಸತ್ಯವಾದಿ

48th Year
Satyavadi
DAILY
MYSORE 4

ಸಂಸ್ಥಾಪಕರು — ಅಮೆನೆಸಿಂಸ್ಟ್ರೇದಾರ್ ಎಂ ವಿ ಸುಬ್ಬರಾಯುರು ಸಂಪಾದಕರು — ಧರ್ಮಪ್ರಚಾರನಿರತ ಎಂ ಎಸ್ ಕೃಷ್ಣರಾವ್ 2

ಗರ್ಭಪಾತ

★

ಮುಂದುವರಿದಿರುವ, ಅಭ್ಯುದಯ ಗೊಳ್ಳುತ್ತಿರುವ ನವೀನ ವಿಶ್ವವು ಗರ್ಭ ಪಾತವನ್ನು ಶಾಸನಬದ್ಧವಾಗಿ ಮಾಡಲು ತೀರ್ಮಾನಿಸಿದೆ ; ಗರ್ಭಪಾತವನ್ನು ನ್ಯಾಯಸಮ್ಮತವಾಗಿ ಮಾಡಿರುವ ದೇಶವು ಜಪಾನು ಮಾತ್ರ ; ಇದರ ಪರಿಣಾಮವೇನಾಗಿದೆ ? ಜಪಾನಿನಲ್ಲಿ ಪ್ರತಿವರ್ಷಕ್ಕೆ 80000 ಅಕ್ರಮಶಿಶುಗಳಾಗುತ್ತಿದ್ದುದು ಮೊದಲಿಗಿಂತ ಸಾಕಷ್ಟು ಹೆಚ್ಚಾಗಿದೆ; ಅಕ್ರಮಶಿಶುವೆಂದರೆ ತೀರ ಸಾಮಾನ್ಯತೆಯಾಗಿಹೋಗಿದೆಯಾದ್ದರಿಂದ ಗರ್ಭಪಾತಕ್ಕೆ ಮಾರು ಹೋಗಬೇಕಾದರೆ ಅದು ಸಮಂಜಸವೆಂದು ವುದಕ್ಕಾಗಿ : ಅದರಿ ಗರ್ಭಪಾತದಿಂದ ಸಮಾಜವು ನಮ್ಮಿಂದ ಸರಿಯಾಗಿತ್ತದೆ.

ಟೆಲಿವಿಜನ್ ಆಥವಾ ಅಣುಬಾಂಬು

ಕೆಲ ದಿವಸಗಳ ಹಿಂದೆ ಸ್ಥಾನಿಕ ಸ್ವಾಮ್ಯದಲ್ಲಿ ಪ್ರಕಟಿತ ಪಾಲಿಕರ ಲೇಖನದ ವಿಷಯವೆಂದರೆ—

ಭಾರತದಲ್ಲಿ ಟೆಲಿವಿಜನ್ನು ಹರಡುವ ಕಾರ್ಯಕ್ರಮಕ್ಕಾಗಿ ಭಾರತ ಸರಕಾರ 100 ಕೋಟಿ ರೂಗಳನ್ನು ಖರ್ಚು ಮಾಡಲಿರುವುದಾಗಿ ನಾನು ಪತ್ರಿಕೆಗಳಲ್ಲಿ ಓದಿ ವಿಸ್ಮಯಗೊಂಡೆನು ಪ್ರಧಾನಿಗಳು ಹಿಂದೆ ಹೇಳಿದ್ದರು - ಆರ್ಥಿಕ ಕಾರಣದಿಂದ ಭಾರತವು ಅಣು ಬಾಂಬು ತಯಾರಿಸಲು ಸಾಧ್ಯವಿಲ್ಲವೆಂದು. ಚೀನಾ ಆಗಲೇ ಅಣು ಬಾಂಬು ಹೊಂದಿದೆ ; ಪಾಕಿಸ್ತಾನವೂ ಒಂದು ದಿನ ಹೊಂದಲಿದೆ : ನಮ್ಮ ಸರಕಾರಕ್ಕೆ ದೇಶದ ರಕ್ಷಣೆಗೆ ಅಣು ಬಾಂಬಿಗಿಂತ ಟೆಲಿವಿಜನ್ನು ಮುಖ್ಯವಾಗಿದೆ.

† ಈ ಸಮಂಜಸ ವಿಷಯದಲ್ಲಿ ಸರ್ಕಾರ ಏನು ಹೇಳಬಲ್ಲದು : ಏನೂ ಸಾಧ್ಯವಿಲ್ಲ ! ಟೆಲಿವಿಜನ್ನಿಗೆ 100 ಕೋಟಿ ಮತ್ತು ಅಣುಬಾಂಬಿಗೆ 100 ಕೋಟಿ; ಇವೆರಡರಲ್ಲಿ ತಾರತಮ್ಯ ವಿಲ್ಲ !

— Truth

ಕೇರಳದಲ್ಲಿ ಚುನಾವಣೆ ನಡೆಸುವ ವಿಚಾರದಲ್ಲಿ

★

ಗೋವಾ ಸಮಸ್ಯೆ

ಬೆಂಗಳೂರು— ಗೋವಾ ವಿಚಾರದಲ್ಲಿ ಉನ್ನತ ಪಟ್ಟದ ಎಂಡನೇ ಸುತ್ತಿನ ಮಾತುಕತೆಯು ದೆಹಲಿಯಲ್ಲಿ ವೈಸೂರು ಮುಖ್ಯ ಮಂತ್ರಿ ನಿಜಲಿಂಗಪ್ಪನವರ ಪ್ರಧಾನಿ ಶಾಸ್ತ್ರಿಗಳು ಮತ್ತು ಕಾಂಗ್ರೆಸ್ ಅಧ್ಯಕ್ಷ ಕಾಮರಾಜರು, ಇವರುಗಳಲ್ಲಿ ಆಗಸ್ಟು 6 – 7 ರಲ್ಲಿ ನಡೆಯುವ ನಿರೀಕ್ಷಣೆಯಿದೆ

★

ದ್ವಿಭಾಷೆ

ಬೆಂಗಳೂರು ಲಾಲಬಾಗು ಗಾಜಿನ ಮನೆಯಲ್ಲಿ ಮಹಿಳಾ ಕಾರ್ಯಕರ್ತರ ದೊಡ್ಡ ಗಪಿನಲ್ಲಿ ಮಾತನಾಡಿದಾಗ ಅವರೆಲ್ಲರಿಗೂ ತಿಳಿವಳಿಕೆಗಾಗಿ ಹಿಂದಿ ಮತ್ತು ಇಂಗ್ಲೀಷು ಎರಡು ಭಾಷೆಗಳಲ್ಲಿಯೂ ಭಾರತ ವಾರ್ತಾ ಮಂತ್ರಿ ಇಂದಿರಾ ಗಾಂಧಿ ಮಾತನಾಡಿದರು.

★

ಕರಾಳ ಧ್ವಜ

ತಿರುವೇಂದ್ರಂಗೆ ನಿನ್ನೆ ಗೃಹ ಮಂತ್ರಿ ನಂದಾರು ಬಂದಾಗ ವಾವು ಕಮ್ಯೂನಿಸ್ಟರು ಕಂಡಗಳು ಕರಾಳ ಧ್ವಜ ಪ್ರದರ್ಶನದೊಂದಿಗೆ ' ಗೋ-ಬ್ಯಾಕ್ ' ಎಂದು ಕೂಗುತ್ತಿದ್ದರು — ತಿರುವೇಂದ್ರಂನಲ್ಲಿ ಈ ರೀತಿ ನಡೆಯುತ್ತಿದ್ದಾಗ ರಾಜ್ಯಾದ್ಯಂತ ಜಿಲ್ಲಾ ವತ್ತು ತಾಲ್ಲೂಕು ಕೇಂದ್ರಗಳಲ್ಲಿ ವಾವು ಕಮ್ಯುನಿಸ್ಟರು ತಮ್ಮ ಕಡೆಯವರನ ಬಿಡುಗಡೆಯನ್ನು ಪ್ರತಿಭಟಿಸಿ ಕರಾಳ ಧ್ವಜದೊಡನೆ ಮೆರವಣಿಗೆ ನಡೆಸಿದರು.

ಕೇರಳ ಚುನಾವಣೆ

ತಿರುವೇಂದ್ರಂ— ಕೇರಳದಲ್ಲಿ ಶೀಘ್ರದಲ್ಲಿ ಚುನಾವಣೆ ನಡೆಸಲು ಪರಿಸ್ಥಿತಿ ಅರಿಯಲು ಗೃಹ ಮಂತ್ರಿ ನಂದಾರವರು ನಿನ್ನೆ ಇಲ್ಲಿಗೆ ಬಂದು ನಾಯರ್, ಎಸ್ವಾಕ್ಟಿಯಸ್ ದಂಗಡಗಳ ನಾಯಕರೊಡನೆ ಮಾತುಕತೆ ನಡೆಸಿದರು ಕಾಂ– ಖಾದೀವು ನಾಯರ್ ಮತ್ತು ಖಂಡರೊಡನೆ ಮಾತುಕತೆ ನಡೆಸಿ, ಅವರು ಭಿನ್ನಮತದ ಕಾಂಗ್ರೆಸ್ಸಿನವರನ್ನು ಕಾಂಗ್ರೆಸ್ಸಿನ ಸೇರಿಸಿಕೊಳ್ಳಲು ಸಲಹೆ ಮಾಡಿದರು — ಆದಷ್ಟುಬೇಗ ಇಲ್ಲಿ ಭಿನ್ನವಾದ ಸರಕಾರ ಸ್ಥಾಪನೆಯಾಗಬೇಕೆಂಬ ತಮ್ಮ ಉತ್ಸಾಹವನ್ನು ನಂದಾರವರು ವ್ಯಕ್ತಪಡಿಸಿದರು.

ಗೋವಾ ವ್ಯವಸ್ಥೆ ಸಾಧ್ಯ

ನವದೆಹಲಿ— ಗೋವಾ ವಿಚಾರದಲ್ಲಿ ಎಲ್ಲಾ ಪಕ್ಷಗಳಿಗೂ ತೃಪ್ತಿಕರವಾದ ರೀತಿಯಲ್ಲಿ ಪರಿಹಾರ ಕಂಡುಹಿಡಿಯಲು ಸಾಧ್ಯವೆಂದು ಪ್ರಧಾನಿ ಶಾಸ್ತ್ರಿಗಳು ಅಭಿಪ್ರಾಯವ್ಯಕ್ತಪಡಿಸಿದರು.

ಸ್ಕೌಟ್ ಕಾರ್ಡ್

ವೈಸೂರು—ಜಿಹೊಸ ಸಕ್ಕರೆ ಗುರುತು ಕಾರ್ಡ್‌ಗಳು ತಾ|| 27 ರಿಂದ 31 31 ರವರೆಗೆ ಹಂಚಲಾಗುವುದೆಂದು ತಿಳಿಯಬರುತ್ತದೆ

ಪೋಲೀಸು ಅಧಿಕಾರಿಗಳ ಮಾತು

ನವದೆಹಲಿ— ಕಚ್-ಸಿಂಧ್ ಗಡಿಯಲ್ಲಿ ಅವಶ್ಯಕವಾದ ಉಸ್ತುವಾರಿ ಎಷ್ಟೆಂದು ನಿರ್ಧರಿಸಲು ಗಡಿಕಾ ಬಜಾರಿನಲ್ಲಿ ತಾ|| 29 ರಂದು ಎರಡು ಸರಕಾರಗಳ ಪೋಲೀಸು ಅಧಿಕಾರಿಗಳು ಮಾತುಕತೆ ನಡೆಯಬೇಕೆಂಬ ಪಾಕಿಸ್ತಾನದ ಸಲಹೆಗೆ ಭಾರತ ಒಪ್ಪಿದೆ

★

ಬೆಂಗಳೂರು — ಆಹಾರವಲಯಗಳನ್ನೆಲ್ಲಾ ವಜಾಮಾಡಲು ಮುಖ್ಯಮಂತ್ರಿ ದೇವರಾಯರು ತೀರ್ಮಾನಿಸಿದ್ದಾರೆ.

ಕ್ಲೈವ್‌ಗೆ - ಬಂಗಾಳಿ ಬರುತ್ತಿತ್ತು

ಲಾರ್ಡ್ ಕ್ಲೈವ್‌ಗೆ ಬಂಗಾಳಿ ಭಾಷೆ ಬರೆಯಲೂ ಓದಲೂ ಬರುತ್ತಿತ್ತು ; ಇದು ಅತ್ಯಂತ ಅರ್ಥವಾಗಿ ಕಾಣಬಹುದು. ಆತನು ಬಂಗಾಳಾದಲ್ಲಿದ್ದಾಗ ಕಲಿತನು : ಕ್ಲೈವ್‌ಗೆ ಬಂಗಾಳಿ ಬರುತ್ತಿದ್ದುದನ್ನು ತೋರಿಸಲು ಬ್ರಿಟನ್ನಿನಲ್ಲಿ ಕಾಗದಪತ್ರ ಬರವಣಿಗೆಗಳೂ ಇವೆ — Truth

ನಾಳೆಯ ಪಂಚಾಂಗ

ದೈವಜ್ಞ ಶಿಖಾಮಣಿ
ಅಸ್ಥಾನವಿದ್ವಾನ್ ಧರ್ಮಾಧಿಕಾರಿ
ರಾಜಕಾರ್ಯಾಪೇಕ್ಷ, ಜ್ಯೋತಿರ್ವಿದ್ವನ್ಮಣಿ
ಸಂಪತ್ಕೃಷ್ಣಜೋಯಿಸರಿಂದ

28 ಬುಧವಾರ ಅಮಾವಾಸ್ಯೆ ಪುಷ್ಯ

—

ಶಾಲಿವಾಹನ ಅಮಾವಾಸ್ಯೆ ಪ್ರಯುಕ್ತ ಸತ್ಯವಾದಿ ಕಾರ್ಯಾಲಯಕ್ಕೆ ರಜವಿದೆ

ಸಕ್ಕರೆ

ನವದೆಹಲಿ— ಸಹಕಾರ ಸಕ್ಕರೆ ಕಾರ್ಖಾನೆಗಳು 64–65 ರ ಸಕ್ಕರೆ ವರ್ಷದಲ್ಲಿ ಸಕ್ಕರೆ ಉತ್ಪಾದನೆಯನ್ನು ಶೇಕಡ 20 ರಷ್ಟು ಹೆಚ್ಚಿಸಿವೆ

ಭಾರತದ ಕೇಳಿಕೆ

ಜಿನಿವಾದಲ್ಲಿನ ಮಾತುಕತೆಯಲ್ಲಿ, ಭಾರತವು ಅಮೇರಿಕಾಕ್ಕೆ ಕೊಡುವ ಪ್ರಾಂ ರೀಯಾಯಿತಿ ಕೇಳಿಕೆಯ ವನವಿ ಪತ್ರವನ್ನು ಅಮೇರಿಕಾ ಪ್ರಾತ್ಯಲೋಚಿಸಿ ತಕ್ಕದ್ದೆಂದು ಒಪ್ಪಂದವಾಯಿತು.

ತ್ರಿಜಟ ಯಾಚಕನಾದ

(ಮುಂದುವರಿದುದು)

ಶ್ರೀರಾಮನು ನಕ್ಕು ; ಆ ನಗೆಯಲ್ಲಿ ಎಂತಹ ಆಕರ್ಷಣೆ ಇತ್ತು,- ವಾಮತೆಯು ತಾಯಿ ವಾತ್ಸಲ್ಯಮಯ ನಗೆಯದು ! ಬ್ರಾಹ್ಮಣನೊಡನೆ ವಿನೋದವಾಡಬೇಕೆಂದು ಅವನಿಗೆ ತೋರಿತು ; ಅವನು ನುಡಿದ ' ಪೂಜ್ಯರೇ, ನಿಮ್ಮ ಕೈಯಲ್ಲಿರುವ ಈ ದಡವನ್ನ ಎಷ್ಟ ದೂರ ಬಿಸಾಡುತ್ತೀರೋ ಅದರ ಒಳಗಿರುವ ಹೆಸರು ಗಳನ್ನೆಲ್ಲ ನಿಮಗೆ ಕೊಡುತ್ತೇನೆ '.

ಬ್ರಾಹ್ಮಣನಿಗೆ ಸಂತೋಷವಾಯಿತು : ಹೌದೇ ! ನಾನು ಮೂರು ಕಡೆಗೆ ಎಸೆಯುವಷ್ಟರಲ್ಲಿ ನೀನು ಅಷ್ಟೂ ಹೆಸರುಗಳನ್ನು ಹೇಳಬೇಕು, ನೋಡು, ನನ್ನ ಶಕ್ತಿಯನ್ನು, ಎಂದು ಗಂಡುಕಜ್ಜಿ ಕಟ್ಟಿ ತನ್ನ ಕೈಯಲ್ಲಿರುವ ದಂಡವನ್ನೊಮ್ಮೆ ಗಾಳಿಯಲ್ಲಿ ಗಿರಗಿರನೆ ತಿರುಗಿಸಿ ಒಂದೇ ಏಟಿಗೆ ಬೀಸಿಬಿಟ್ಟ ; ಆ ದಂಡ ಸೂರ್ಯಗೋಡಕ್ಕಿಂತ ವೇಗವಾಗಿ ಓಡಿತು, ಸರಯೂ ನದಿಯನ್ನು ತಿಂಟತು ಆಕಳ ಹಿಂಡನ್ನು ದಾಟಿತು, ಗೂಳಿಗಳ ಪಕ್ಕದಲ್ಲಿ ಬಿದ್ದಿತ.

ಬಹದೂರ ಗಾಳಿಯಲ್ಲಿ ತೇಲುತ್ತಿತ್ತು ಹೊಳಪಿನ ಆ ದಂಡವನ್ನು ನೋಡಿ ತಾನು ಬ್ರಾಹ್ಮಣನು- ಪ್ರಭೋ ನನ್ನ ದಂಡ ಹೊಯಿತು ಎಂದು ವ್ಯಸನ ನುಡಿದನು.

ಶ್ರೀರಾಮಚಂದ್ರ ಭಕ್ತವತ್ಸಲನಲ್ಲವೇ ? ಅವನು ಬ್ರಾಹ್ಮಣನನ್ನು ಸಂತವಿಸಿತಾ ನುಡಿದ- ಪೂಜ್ಯರೇ ನಿಮ್ಮ ದುಡವನ್ನು ನಾನು ತಂದು ಕೊಡುವೆ ; ಈಗ ನನ್ನಿಂದ ಆಗಬೇಕಾದುದೇನು ಹೇಳಿ ; ನನ್ನ ದ್ರವ್ಯ ನಿಮ್ಮಂತಹವರ ಕೈಸೇರಿದರೇ ಸಾರ್ಥಕವಾಗುವುದು, ಜನ್ಮಪಾವನವಾಗುವುದು

ಬ್ರಾಹ್ಮಣನಿಗೆ ಅವನ ವಿನಯ ಮಾತಿನಿಂದ, ಅವನು ಪ್ರಭು ತಾನು ಪ್ರಜೆ ಎಂಬ ಭೇದ ವಿರಿತಾಹೋಗಿತ್ತು ; ಅಂತಹ ಆ ಮಾತುಗಳಲ್ಲಿತ್ತು ; ಬ್ರಾಹ್ಮಣ ನುಡಿದ- ಹಾಗಾದರೆ ನನ್ನ ಬಡತನ ನೀಗಿಸಿ, ದಾನಧರ್ಮ ಮಾಡುವ ಶಕ್ತಿಯೆಯಲ್ಲಿರುವಂತೆ ಕರುಣಿಸು.

ಶ್ರೀರಾಮಚಂದ್ರ ಆ ಬ್ರಾಹ್ಮಣನಿಗೆ ಬೇಕಾದಷ್ಟು ಧನಕನಕ ಕೊಟ್ಟ ನಲ್ಲದೇ, ಆಕಳ ಹಿಂಡನ್ನೂ ಕೊಟ್ಟ ; ಇದನ್ನುಕಂಡು ಸಂತೋಷಚಿತ್ತನಾದ ಬ್ರಾಹ್ಮಣನು ಶ್ರೀರಾಮಚಂದ್ರನನ್ನು ವಿನಯಪೂರ್ವಕವಾಗಿ ಆಶೀರ್ವದಿಸಿ, ತನ್ನ ಮನೆಗೆ ಒಂದು ಶಕ್ತಿಯೆಯಲ್ಲಿ ಆ ಹಣವನ್ನು ಉದಯೋಗಿಸುತ್ತಾ ಸುಖವಾಗಿದ್ದ : ಅವನೇ ತ್ರಿಜಟ. (ಪ್ರಭಾತ)

Help The Gorakshana

ಗೋರಕ್ಷಣೆಗೆ ಬೆಂಬಲ ನೀಡಿ

ಗೋ ರಕ್ಷಣೆಗೆ ಲೇಖನಗಳನ್ನೂ ಪ್ರೋತ್ಸಾಹ ಧನವನ್ನೂ ವಂದನಾಪೂರ್ವಕವಾಗಿ ಸ್ವೀಕರಿಸಲಾಗುವುದು.

Quality Printing — Neat Binding

Lakshminarasimha Press

Sivarampet, Mysore

ಆಶೋಕ ಏಜೆನ್ಸೀಸ್

ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್, ಮೈಸೂರು

ಎಲ್ಲ ವಿಧದ ಆಯುರ್ವೇದ ಔಷಧಗಳೂ ನಮ್ಮಲ್ಲಿ ದೊರೆಯುತ್ತವೆ

ದೊಡ್ಡಗಳಿಗೆ ಹಾಗೂ ಔಷಧಿ ಕೊಡಲಾಗುತ್ತದೆ

ವುಡಲ್ಯಾಂಡ್ಸ್ ಮಹೋನ್ನತ 10 ನೇ ವಾರ

ಜಾನ'ವರ' Janwar

ರಾಜಶ್ರೀ, ಶಮ್ಮಿ ಕಪೂರ್, ಪೃಥ್ವೀರಾಜ್, ರಾಜೇಂದ್ರನಾಥ್ ಅಭಿನಯಿಸಿರುವ
ಸುಂದರದೃಶ್ಯಗಳು, ಮಧುರ ಸಂಗೀತ, ಆಕರ್ಷಣೀಯ ನೃತ್ಯಗಳು
ಹಾಸ್ಯವಿನೋದಗಳಿಂದ ಕೂಡಿದ ಈಸ್ಟ್‌ಮನ್ ಕಲರ್ ಹಿಂದೀ ಚಿತ್ರ

ಅಪರ— ವೈಭವ 5 ನೇ ವಾರ

ಮಾಡರ್ನ್ ಥಿಯೇಟರ್ಸ್‌ನವರ 100 ನೇ ಅಮೋಘ ಕನ್ನಡ ಚಿತ್ರ

ವಲವನಕ್ಕು ವಲವನ'

ನಟವರ್ಗ— ಜಮಿನಿ ಗಣೇಶ್, ಸಾವಿತ್ರಿ, ತಂಗವೇಲು, ಅಶೋಕ್
ಮುತ್ತುಲಕ್ಷ್ಮಿ, ಮನೋರಮ [ಪ್ರತಿ ದಿನ 3 ಆಟಗಳು]

SHAKTI SUDHA

A Superb Tonic

Protect the Cow



ಗೋಸಂರಕ್ಷಣೆ ಮತ್ತು ವ್ಯಾಪಿದಯೂ ಕಾರ್ಯಗಳು ಹೆಚ್ಚಿಚ್ಚಾಗಿ ನಡೆಯಲಿ

Edited, Printed & Published by Dharma pracharn niratha
M S Krishna Rao (Proprietor) at the Satyavadi Press
Chamarajapuram, Mysore 4